CC- 69/2025

ಪಿ. ಡಬ್ಲ್ಯೂ.ನಂ. - 1

<u>ದಿನಾಂಕಃ 04.07.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು</u>

**ಮುಂದುವರೆದ ಮುಖ್ಯ ವಿಚಾರಣೆಃ ಫಿರ್ಯಾದಿ ಪರ ಶ್ರೀ. ಎಂ.ಎಸ್.ಜಿ ವಕೀಲರಿಂದ –**

ಕ್ರಯ ಪತ್ರದ ಧೃಡೀಕೃತ ನಕಲನ್ನು ನಿಪಿ–8 ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿತನ ಪರ ಶ್ರೀ.ಎಂ.ಎ.ಬಿ ವಕೀಲರಿಂದಃ–**

ನಿಪಿ–8 ರ ಮೂಲ ಕ್ರಯ ಪತ್ರವು ಈವರೆಗೆ ನನ್ನ ಬಳಿಯೇ ಇತ್ತು ಎಂದರೆ ಸರಿ. ನಿಪಿ–8 ಅನ್ನು ಉಪ ನೊಂದಣಾಧಿಕಾರಿಗಳ ಕಚೇರಿಯಿಂದ ತೆಗೆದುಕೊಂಡು ಹೋಗುವಂತೆ ನನಗೆ ಹೇಳಿದ್ದನು ಮತ್ತು ಸದರಿ ಕ್ರಯ ಪತ್ರವನ್ನು ತಾನೇ ಸೊರಬದ ನಮ್ಮ ಮನೆಗೆ ಬಂದು ತೆಗೆದುಕೊಂಡು ಹೋಗುತ್ತೇನೆ ಎಂದು ಹೇಳಿದ್ದನು. ಆದರೆ ಆರೋಪಿತನು ಕ್ರಯ ಪತ್ರವನ್ನು ತೆಗೆದುಕೊಂಡು ಹೋಗಲು ಬರಲಿಲ್ಲ. ನಿಪಿ–8 ರ ಮೂಲ ಕ್ರಯ ಪತ್ರದ ಆಧಾರದ ಮೇಲೆ ಸೊರಬದ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಲಯ
ಮತ್ತು ಜೆಎಂಎಫ್‌ಸಿ, ಸಾಗರ.